## ಪೊಲೀಸ್ ಬೇಕರಿ



ಆರು ವರ್ಷದ ನನ್ನ ಮೊಮ್ಮಗಳು ಪೂರ್ವಿ ಬಹಳ ಚೂಟಿ. ಅವಳೊಂದಿಗೆ ಒಂದು ದಿನ ಸಂಜೆ ಸ್ಕೂಟಿಯಲ್ಲಿ ಮಾರ್ಕೆಟ್‌ಗೆ ಹೊರಟಿದ್ದೆ. ಪೊಲೀಸ್ ಕಚೇರಿ ಬಳಿ ಅಲ್ಲಿನ ಸಿಬ್ಬಂದಿಗಾಗಿಯೇ ಒಂದು ಬೇಕರಿ ಇದೆ. ಅದರ ಮುಂದೆ 'ಪೊಲೀಸ್ ಬೇಕರಿ' ಎಂದು ಬೋರ್ಡ್ ಹಾಕಿದ್ದಾರೆ. ಅದನ್ನು ಕಂಡ ಮೊಮ್ಮಗಳು 'ಅಜ್ಜಾ, ಪೊಲೀಸರು ಬೇಕಾದರೆ ಇಲ್ಲಿಗೆ ಬರಬೇಕೇನು?' ಎಂದು ಪ್ರಶ್ನಿಸಿದ್ದು ಕೇಳಿ ನನಗೆ ನಗೆ ತಡೆಯಲಾಗಲಿಲ್ಲ.

**ಶಿ.ಗು. ಕುಸುಗಲ್ಲ**

## ಮೂರ್ತಿ ಚಿಕ್ಕದು...

ನನ್ನ ಅಣ್ಣನ ಮಗ ಮೂರ್ತಿ ದೊಡ್ಡವ ಮತ್ತು ಮಗಳು ಕೀರ್ತಿ ಚಿಕ್ಕವಳು. ಇಬ್ಬರೂ ಒಂದೇ ಶಾಲೆಯಲ್ಲಿ ಓದುತ್ತಾರೆ. ಮೂರ್ತಿಯ ಪ್ರತಿಭೆಯನ್ನು ಗುರುತಿಸಿ ಅವನಿಗೆ ಶಹಭಾಸ್‌ಗಿರಿ ಕೊಡಲು ಅವರ ಗುರುಗಳು ಎಲ್ಲರ ಸಮ್ಮುಖದಲ್ಲಿ 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಅಂದರಂತೆ. ಸಂಜೆ ಕೀರ್ತಿ ದೂರು ತೆಗೆದುಕೊಂಡೇ ಮನೆಗೆ ಬಂದಳು. 'ಅಮ್ಮ ಟೀಚರ್‌ಗೆ ಅಷ್ಟೂ ಗೊತ್ತಾಗೊಲ್ಲೇನಮ್ಮ, ಮೂರ್ತಿ ಅಣ್ಣ ಚಿಕ್ಕವನಂತೆ, ನಾನು ದೊಡ್ಡವಳಂತೆ. ಮೂರ್ತಿ ಚಿಕ್ಕದು, ಕೀರ್ತಿ ದೊಡ್ಡದು ಅಂದರು. ನೀನೇ ಹೇಳಮ್ಮ, ಕೀರ್ತಿನೇ ಚಿಕ್ಕದು, ಮೂರ್ತಿನೇ ದೊಡ್ಡದು ಅಂತ...' ಎಂದಳು!

**ಪೂರ್ಣಿಮಾ ಭಂಡಾರ್ಕರ್**



ಚಿತ್ರಗಳು: ಗಣೇಶ ಆಚಾರ್ಯ